# ಸುಖದ ಕನವರಿಕೆಯ ಬೆನ್ನಿಗೆ ಸೂತಕದ ಛಾಯೆ

ವಿಶೇಷ ಕಾಕ್‌ಟೇಲ್ ಅಮಲಿನಲ್ಲಿ ಮುಳುಗಿದ ಸೋನಾ ಸುಖದ ಸಾಧ್ಯತೆಗಳ ಅನ್ವೇಷಣೆಯಲ್ಲಿ ತೊಡಗಿರುವಾಗಲೇ ಅತ್ತ ಮುಂಬಯಿಯಲ್ಲಿ ಗುನ್ನಾಲಾಲ್ ರಾತ್ರಿ ಊಟ ಮುಗಿಸಿ ಆಸ್ಕರ್ ವೈಲ್ಡನಿಗೆ ಫೋನ್ ಮಾಡಲು ಪ್ರಯತ್ನಿಸುತ್ತಿದ್ದ. ಕರೆ ಹೋಗದ ಕಾರಣ ವಾಟ್ಸಾಪ್ ವಿಡಿಯೊ ಕಾಲ್ ಮಾಡಿದ. ಫೋನ್ ಸ್ವಿಚ್ ಆಫ್ ಆಗಿದ್ದ ಕಾರಣ ಹತ್ತೂವರೆ ಗಂಟೆಯಲ್ಲಿ ತಮ್ಮ ಕಂಪನಿಯ ಷೇರುಗಳ ಬೆಲೆಯನ್ನು ಪರೀಕ್ಷಿಸುತ್ತಿದ್ದ. ಬೆಳಿಗ್ಗೆಯಿಂದ ನಡೆದ ವಿದ್ಯಮಾನಗಳು ಗುನ್ನಾಲಾಲನ ನೆಮ್ಮದಿಯನ್ನು ಸ್ವಲ್ಪ ಕದಡಿದ್ದರೂ ಕೊನೆಯಲ್ಲಿ ಸಮಾಧಾನ ಮೂಡಿತ್ತು. ಅವತ್ತು ಬೆಳಗ್ಗೆ ಎಂಟು ಗಂಟೆಗೆಲ್ಲ ಇ.ಡಿ. ಮತ್ತು ಸಿಬಿಐನವರು ವಿಕ್ರಂ ದೇಶಪಾಂಡೆಯ ಮನೆ, ಅಪಾರ್ಟ್‌ಮೆಂಟ್ಸ್, ಲಾಡ್ಜಿಂಗ್ಸ್, ರೆಸ್ಟೋರೆಂಟ್ಸ್ ಮುಂತಾದ ವಿಕ್ರಂ ದೇಶಪಾಂಡೆಗೆ ಸಂಬಂಧಿಸಿದ ಎಲ್ಲಾ ವ್ಯಾಪಾರ, ವಹಿವಾಟು ಸಂಸ್ಥೆಗಳ ಮೇಲೆ ದಾಳಿ ನಡೆಸಿದ್ದರು. ಈ ವಿಷಯವನ್ನು ಗುನ್ನಾಲಾಲನಿಗೆ ಮೊದಲು ಫೋನ್ ಮಾಡಿ ತಿಳಿಸಿದ್ದು ಸಂದೀಪ್ ಕೊಚಾರ್. ಮಾಧ್ಯಮಗಳಲ್ಲಿ ಸಿಬಿಐ ಮತ್ತು ಇ.ಡಿ. ಟೀಮಿನವರು ರೈಡ್ ಮಾಡುತ್ತಿರುವ ಸುದ್ದಿ ದೃಶ್ಯಗಳ ಸಮೇತ ಬಿತ್ತರವಾಗುತ್ತಿತ್ತು. ಅದರ ಜೊತೆಗೆ ವಿಕ್ರಂ ದೇಶಪಾಂಡೆಯನ್ನು ಮುಂಬಯಿ ಮಹಾನಗರ ಪಾಲಿಕೆಯ ಕಮಿಷನರ್ ಹುದ್ದೆಯಿಂದ ಕೆಲಸಕ್ಕೆ ಬಾರದ ಜಾಗಕ್ಕೆ ವರ್ಗಾವಣೆ ಮಾಡಲಾಗಿತ್ತು. ಗುನ್ನಾಲಾಲ್ ಈ ಸಮಯದಲ್ಲಿ ವಿಕ್ರಂ ದೇಶಪಾಂಡೆಗೆ ತನ್ನಿಂದ ಏನಾದರೂ ಸಹಾಯ, ಸಹಕಾರಗಳು ಅಗತ್ಯವಿದ್ದರೆ ಮಾಡುವುದಾಗಿ ಸಂದೀಪ್ ಕೊಚಾರನಿಗೆ ಹೇಳಿದ್ದ. ಅಂಥ ಸಮಸ್ಯೆಯೇನೂ ಆಗಲಾರದೆಂದು, ಅಗತ್ಯ ಬಿದ್ದರೆ ಫೋನ್ ಮಾಡುವುದಾಗಿ ತಿಳಿಸಿದ್ದ ಸಂದೀಪ್ ಕೊಚಾರ್. ಗುನ್ನಾಲಾಲ್ ಆ ಸುದ್ದಿಯ ಕಡೆ ಗಮನ ಇಟ್ಟಿದ್ದ. ವಿಕ್ರಂ ದೇಶಪಾಂಡೆ ವಿಚಲಿತರಾಗದೆ ಸಂಬಂಧಪಟ್ಟ ಇಲಾಖೆಯವರಿಗೆ ಕೇಳಿದ ವಿವರಗಳನ್ನು ಒದಗಿಸುತ್ತಿರುವುದು ಮಾಧ್ಯಮ ದೃಶ್ಯಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಸಂಜೆ ಐದು ಗಂಟೆಗೆಲ್ಲ ರೈಡ್ ಕೆಲಸ ಮುಗಿದಿತ್ತು. ದೇಶಪಾಂಡೆಯ ವ್ಯವಹಾರದಲ್ಲಿ ಒಂದೇ ಒಂದು ರೂಪಾಯಿಯ ಮೊತ್ತದಷ್ಟು ಅವ್ಯವಹಾರ ಸಿಬಿಐ ಮತ್ತು ಇ.ಡಿ. ಇಲಾಖೆಯ ಅಧಿಕಾರಿಗಳಿಗೆ ಪತ್ತೆಯಾಗಿರಲಿಲ್ಲ. ಬದಲಾಗಿ ಕೋಟ್ಯಂತರ ರೂಪಾಯಿ ಲಾಭವನ್ನು ವಿಕ್ರಂ ದೇಶಪಾಂಡೆ ಅನಾಥಾಲಯಗಳಿಗೆ, ವೃದ್ಧಾಶ್ರಮಗಳಿಗೆ, ಬಡ ವಿದ್ಯಾರ್ಥಿಗಳಿಗೆ ಡೊನೇಟ್ ಮಾಡಿರುವ ವಿವರಗಳು ಅಧಿಕಾರಿಗಳಿಗೆ ಸಿಕ್ಕಿದ್ದವು. ಆ ಸುದ್ದಿಯನ್ನು ಕೂಡ ಮಾಧ್ಯಮಗಳು ಬಿತ್ತರಿಸಿದ್ದವು. ವಿಕ್ರಂ ದೇಶಪಾಂಡೆಯ ಗೌರವ ಇದರಿಂದ ದುಪ್ಪಟ್ಟುಗೊಂಡಿದ್ದಲ್ಲದೆ ಅವರ ವರ್ಗಾವಣೆಯನ್ನು ಸರ್ಕಾರ ರದ್ದು ಮಾಡಿ, ಮಹಾನಗರ ಪಾಲಿಕೆಯ ಕಮಿಷನರ್ ಆಗಿ ಮುಂದುವರೆಯಲು ಮರು ಆದೇಶವನ್ನು ಆರು ಗಂಟೆಗೆಲ್ಲ ಹೊರಡಿಸಿತ್ತು.

ಗುನ್ನಾಲಾಲ್ ಫೋನ್ ಮಾಡಿ ವಿಕ್ರಂ ದೇಶಪಾಂಡೆಗೆ ಅಭಿನಂದನೆಗಳನ್ನು ಸಲ್ಲಿಸಿದ್ದ. ಈ ವೇಳೆಯಲ್ಲಿ ಪೂರ್ವಿಕಾ ಮತ್ತು ಆಸ್ಕರ್ ವೈಲ್ಡ್ ಮುಂಬಯಿಯಲ್ಲಿ ಇಲ್ಲದೇ ಇರುವುದು ಒಳ್ಳೆಯದೇ ಆಯಿತೆಂದು ವಿಕ್ರಂ ದೇಶಪಾಂಡೆ ಹೇಳಿದ್ದನಲ್ಲದೆ ಈ ವಿಷಯದಲ್ಲಿ ಅಂಧೇರಿಯ ಬಿಲ್ಡರ್ ಒಬ್ಬನ ಕೈವಾಡ ಇರಬಹುದೆಂದೂ ಮಾತು ಸೇರಿಸಿದ್ದ. ಹಾಗೆಯೇ ಸಂದೀಪ್ ಕೊಚಾರನಿಗೂ ಫೋನ್ ಮಾಡಿ ವಿಕ್ರಂ ದೇಶಪಾಂಡೆಯ ಬಗ್ಗೆ ಅಭಿಮಾನದ ಮಾತುಗಳನ್ನು ಆಡಿದ್ದ. 'ವಿಕ್ರಂ ದೇಶಪಾಂಡೆಯ ಜನ್ಮ ದಿನಾಂಕ ಮತ್ತು ಹುಟ್ಟಿದ ಗಳಿಗೆ ಅಂಥದ್ದು. ಸಾಯುವವರೆಗೂ

